UASB Library
Newspaper Clippings
Saturday 21-01-2023 Pg .1
Jai Kisan

ಸಾವಯವ ಮೇಳದಲ್ಲಿ ಧಾನ್ಯಗಳ ಸಿರಿ

ಸಿಎಂ ಬಸವರಾಜ ಬೊಮ್ಮಾಯಿ ಚಾಲನೆ | ಕೈಬೀಸಿ ಕರೆಯುತ್ತಿರುವ ಅಂತಾರಾಷ್ಟ್ರೀಯ ಮೇಳ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಅರಮನೆ ಮೈದಾನದಲ್ಲಿ ಕೃಷಿ ಇಲಾಖೆ ಆಯೋಜಿಸಿರುವ ಕೃಷಿ ಮೇಳಕ್ಕೆ ಮೊದಲ ದಿನವೇ ವ್ಯಾಪಕ ಸ್ಪಂದನೆ ವ್ಯಕ್ತವಾಗಿದ್ದು, ಒಂದೇ ಸೂರಿನಡಿ ದೇಶದ ವಿವಿಧ ಭಾಗಗಳಲ್ಲಿ ಸಿರಿಧಾನ್ಯಗಳು ಲಭ್ಯವಾಗುತ್ತಿವೆ.

ಮೂರು ದಿನಗಳ ಅಂತಾರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳಕ್ಕೆ ಶುಕ್ರವಾರ ಚಾಲನೆ ಸಿಕ್ಕಿದೆ. ಮೇಳದಲ್ಲಿ ರೈತರ, ಖರೀದಿದಾರರ, ಮಾರಾಟಗಾರರ ಸಮಾಗಮವಾಗಿದ್ದು, ರಾಜ್ಯ ಹಾಗೂ ಹೊರ ರಾಜ್ಯದ ಸಿರಿಧಾನ್ಯ ಆಹಾರ ಪದಾರ್ಥಗಳನ್ನು ಕಣ್ತುಂಬಿಕೊಳ್ಳಬಹುದಾಗಿದೆ. ರಾಗಿ, ಹಾರಕ, ಸಾಮೆ, ಊದಲು, ಕೊರಲೆ, ಬರಗು, ನವಣೆಯಂತಹ ವೈವಿಧ್ಯಮಯ ಸಿರಿಧಾನ್ಯಗಳಿಂದ ತಯಾರಿಸಲಾಗಿದ್ದ ಸಿಹಿ ತಿನಿಸುಗಳು ಯುವ ಸಮೂಹವನ್ನು ಆಕರ್ಷಿಸಿತು. ಕೃಷಿ ವಿವಿ ವಿದ್ಯಾರ್ಥಿಗಳು ಮಳಿಗೆಗಳಿಗೆ ಭೇಟಿ ನೀಡಿ ಸಿರಿಧಾನ್ಯಗಳ ಬಗ್ಗೆ ಮಾಹಿತಿ ಪಡೆದರು. ಪುಟಾಣಿಗಳು ಸಿರಿಧಾನ್ಯದಿಂದ ತಯಾರಿಸಿದ್ದ ಚಕ್ಕುಲಿ, ರಾಗಿ ಲಡ್ಡು, ರಾಗಿ, ನವಣೆ ಶ್ಯಾವಿಗೆ, ರಾಗಿ ಅಂಬಲಿ, ಸಜ್ಜೆ ಅಂಬಲಿ ಸೇರಿ ಇತರ ಸಿಹಿ ತಿನಿಸುಗಳನ್ನು ತಿಂದು ಸಂಭ್ರಮಿಸಿದರು. ಮೈಸೂರು ದೋಸೆ, ಮೆಣಸು ಪೊಂಗಲ್, ಮಿಲೆಟ್ ಮುರುಕ್ಕು, ಮಿಲೆಟ್ ಖಾರಾ ಚಿವ್ವಾ, ಮಿಲೆಟ್ಸ್ ಬೈಟ್ಸ್, ಮಿಲೆಟ್ಸ್ ಸಿಹಿ ಚಿವ್ವಾ ರುಚಿ ಸವಿದರು.

ಮೇಳದಲ್ಲಿ 300ಕ್ಕೂ ಅಧಿಕ ಮಳಿಗೆಗಳನ್ನು ಸ್ಥಾಪಿಸಲಾಗಿದ್ದು, ತರಹೇವಾರಿ ಸಿರಿಧಾನ್ಯಗಳು ಗ್ರಾಹಕರನ್ನು ಕೈಬೀಸಿ ಕರೆಯುತ್ತಿವೆ. ಕರ್ನಾಟಕ, ಕೇರಳ, ಮಹಾರಾಷ್ಟ್ರ, ಆಂಧ್ರಪ್ರದೇಶ, ಮಣಿಪುರ, ಬಿಹಾರ ಸೇರಿ ದೇಶದ ವಿವಿಧ ರಾಜ್ಯಗಳಿಂದ ಸಿರಿಧಾನ್ಯ ಕಂಪನಿಗಳು ಅಭಿವೃದ್ಧಿಪಡಿಸಿರುವ ಉತ್ಪನ್ನಗಳನ್ನು ಮಳಿಗೆಗಳಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ಮಳಿಗೆ ಸಿಬ್ಬಂದಿ ಸಿರಿಧಾನ್ಯ ಬಗ್ಗೆ ಜನರಿಗೆ ಆಗತ್ಯ ಮಾಹಿತಿ ನೀಡುತ್ತಿರುವುದು ಮೇಳದಲ್ಲಿ ಕಂಡುಬಂತು. ಸಿರಿಧಾನ್ಯಗಳಿಂದ ರಾಶಿಪೂಜೆ ಅಲಂಕರಿಸಲಾಗಿತ್ತು. ನೋಡುಗರನ್ನು ಇದು ಸೆಳೆಯುತ್ತಿತ್ತು. ರಾಜ್ಯದ ಮೂಲೆ ಮೂಲೆಗಳಿಂದ ಸಾವಿರಾರು ಜನರು ಮೇಳಕ್ಕೆ ಆಗಮಿಸಿ ಉತ್ಪನ್ನಗಳ ಬಗ್ಗೆ ಮಾಹಿತಿ ಪಡೆದು ಖರೀದಿಸುತ್ತಿದ್ದರು. ನೈಸರ್ಗಿಕ ಆಡುಗೆ ಎಣ್ಣೆ ತಯಾರಿಸುವ ಎತ್ತಿನ ಗಾಣ ಮೇಳದಲ್ಲಿ ಆಕರ್ಷಣೆ ಕೇಂದ್ರವಾಗಿದೆ. ವಿದ್ಯಾರ್ಥಿಗಳು ಸೇರಿ ಜನರು ಮಳಿಗೆ ಮುಂದೆ ಸೆಲ್ಫಿಕ್ಲಿಕ್ಕಿಸಿಕೊಂಡು ಖುಷಿಪಟ್ಟರು.

ಕೃಷಿ ಮತ್ತು ತೋಟಗಾರಿಕೆ ಇಲಾಖೆ ವಿವಿ ವಿಜ್ಞಾನಿಗಳು ಸಿರಿಧಾನ್ಯ ಮತ್ತು ನೈಸರ್ಗಿಕ ಕೃಷಿ ಬಗ್ಗೆ ಕನ್ನಡದಲ್ಲಿ ಮಾಹಿತಿ ನೀಡಿದರು. ಸಾವಯವ ಕೃಷಿ ಪ್ರಾಮುಖ್ಯತೆ ಮತ್ತದರ ಸವಾಲುಗಳು, ಮೌಲ್ಯವರ್ಧನೆಯಲ್ಲಿ ಯುವ ನವೋದ್ಯಮಿಗಳು ಪಾತ್ರ ಸೇರಿ ಹಲವು ವಿಚಾರಗಳ ಕುರಿತು ತಜ್ಞರು ಬೆಳಕು ಚೆಲ್ಲಿದರು. ರೈತರು ಮತ್ತು ಮಾರಾಟಗಾರರ ಸಂಪರ್ಕ ಕಲ್ಪಿಸಲಾಗಿದೆ. ಮೇಳದಲ್ಲಿ 200 ಮಂದಿ ಮಾರಾಟಗಾರರು, ಉತ್ಪಾದಕರು ತಮ್ಮ ಹೆಸರು ನೋಂದಾಯಿಸಿಕೊಂಡಿದ್ದಾರೆ. ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಉತ್ತರ ಪ್ರದೇಶದ ಕೃಷಿ ಸಚಿವ ಸೂರ್ಯ ಪ್ರತಾಪ್, ರಾಜ್ಯದ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಎಂಎಲ್ಸಿಗಳಾದ ಟಿ.ಎ. ಶರವಣ, ಆ.ದೇವೇಗೌಡ, ಛಲವಾದಿ ನಾರಾಯಣಸ್ವಾಮಿ ಮತ್ತಿತರರಿದ್ದರು.



ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿರುವ 3 ದಿನಗಳ ಅಂತಾರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳಕ್ಕೆ ಸಿಎಂ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಚಿವರಾದ ಡಾ. ಅಶ್ವತ್ಥ ನಾರಾಯಣ್, ಬಿ.ಸಿ. ಪಾಟೀಲ್, ಉತ್ತರ ಪ್ರದೇಶದ ಕೃಷಿ ಸಚಿವ ಸೂರ್ಯ ಪ್ರತಾಪ್ ಶುಕ್ರವಾರ ಚಾಲನೆ ನೀಡಿದರು.

ಹೊಸ ಸಂಶೋಧನೆಗೆ ಆದ್ಯತೆ ನೀಡಿ

ಕೃಷಿ ಕ್ಷೇತ್ರ ಎದುರಿಸುತ್ತಿರುವ ಸವಾಲುಗಳ ಪರಿಹಾರಕ್ಕಾಗಿ ಕೃವಿ ವಿಶ್ವವಿದ್ಯಾಲಯಗಳು ಹೊಸ ಸಂಶೋಧನೆ ನಡೆಸಲು ಮುಂದಾಗಬೇಕಿದೆ. ಆ ಮೂಲಕ ಕೃಷಿ ಕ್ಷೇತ್ರದ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಮೇಳ ಉದ್ಘಾಟಿಸಿ ಮಾತನಾಡಿದ ಅವರು, ಹಳೆಯ ಸಂಶೋಧನೆ ಮಾದರಿ ಬದಲು ಆಧುನಿಕ ತಂತ್ರಜ್ಞಾನ ಅಳವಡಿಸಿ ಸಂಶೋಧನೆ ನಡೆಸಬೇಕು. ಅತಿಯಾದ ನೀರಿನ ಬಳಕೆ, ಹವಾಮಾನ ವೈಪರೀತ್ಯ ಹಾಗೂ ರಾಸಾಯನಿಕ ಬಳಕೆಯಿಂದ ಬೆಳೆಗಳ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಹಾಗಾಗಿ, ಕೃಷಿ ವಿವಿಗಳು ರೈತರ ಜಮೀನುಗಳನ್ನು ಕ್ಯಾಂಪಸ್ ಮಾಡಿಕೊಂಡು ಸಂಶೋಧನೆ ನಡೆಸಬೇಕು. ಹಿಂದೆ ಕೃಷಿ ಕೇವಲ ಆಹಾರ ಉತ್ಪಾದನೆಗೆ ಮಾತ್ರ ಮಾಡಲಾಗುತ್ತಿತ್ತು. ಈಗ ವಾಣಿಜ್ಯ ಉದ್ದೇಶಕ್ಕೆ ಮಾಡಲಾಗುತ್ತಿದೆ. ಆಹಾರ ಧಾನ್ಯ ಉತ್ಪಾದನೆ ಹಾಗೂ ವಾಣಿಜ್ಯ ಬೆಳೆಗಳ ನಡುವೆ ಸಾಮ್ಯತೆ ಕಾಯ್ದುಕೊಳ್ಳದಿದ್ದರೆ ಕೃಷಿ ಸಮತೋಲನ ತಪ್ಪುತ್ತದೆ. ಮುಂದಿನ ದಿನಗಳಲ್ಲಿ ಆಹಾರ ಧಾನ್ಯಗಳ ಕೊರತೆ ಉಂಟಾಗುವ ಸಾಧ್ಯತೆ ಇದೆ. ಎರಡು ವರ್ಷದಿಂದ ಅಡಿಕೆ ಉತ್ಪಾದನೆ ಹೆಚ್ಚಾಗಿದೆ. ಭತ್ತ ಮತ್ತು ಜೋಳವನ್ನು ಅನ್ನಭಾಗ್ಯ ಯೋಜನೆಯಡಿ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಹಿನ್ನೆಲೆಯಲ್ಲಿ ಆ ಬೆಳೆ ಬೆಳೆದ ರೈತರಿಗೆ ಹೆಚ್ಚಿನ ಬೆಲೆ ಸಿಗುತ್ತಿದೆ. ಅದೇರೀತಿ, ನಮ್ಮ ಸರ್ಕಾರದಿಂದ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿಸುತ್ತಿರುವದರಿಂದ ರೈತರಿಗೆ ಅನುಕೂಲವಾಗಿದೆ ಎಂದು ಸಿಎಂ ಬೊಮ್ಮಾಯಿ ವಿವರಿಸಿದರು.

ಗಮನ ಸೆಳೆದ ಪೆವಿಲಿಯನ್

ವಿಶ್ವಸಂಸ್ಥೆ ಈ ವರ್ಷವನ್ನು ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷವಾಗಿ ಘೋಷಿಸಿದೆ. ಈ ಹಿನ್ನೆಲೆಯಲ್ಲಿ ಕೃಷಿ ಇಲಾಖೆ,ರಾಜ್ಯದ ಸಿರಿಧಾನ್ಯ ನವೋದ್ಯಮಿಗಳಿಗೆ ಪ್ರತ್ಯೇಕ ಪೆವಿಲಿಯನ್ ರಚಿಸಿದೆ. ಇಲ್ಲಿ ರಾಜ್ಯದ ಸಿರಿಧಾನ್ಯ ಮತ್ತು ಸಾವಯವ ಉತ್ಪನ್ನಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸಲಾಗುತ್ತಿದೆ. ರಾಜ್ಯದ ಸಾವಯವ ಕೃಷಿ ನೀತಿ, ಸುಸ್ಥಿರ ಪದ್ಧತಿಗಳು, ತಾಂತ್ರಿಕತೆಗಳು, ಸಿರಿಧಾನ್ಯ ಉತ್ಪನ್ನಗಳ ವೈವಿಧ್ಯಮ ತಿನಿಸುಗಳು ಮುಂತಾದವುಗಳನ್ನು ಪ್ರದರ್ಶಿಸಲಾಗಿದೆ. ಕರ್ನಾಟಕ ಪೆವಿಲಿಯನ್‌ನಲ್ಲಿ ಒಟ್ಟು 84 ಮಳಿಗೆಗಳಿವೆ. ಇದರಲ್ಲಿ ಸಿರಿಧಾನ್ಯ ನವೋದ್ಯಮಿಗಳಿಗೆ 30, ಪ್ರಾದೇಶಿಕ ಸಾವಯವ ಒಕ್ಕೂಟಕ್ಕೆ 15, ಕೃಷಿ ಸಂಬಂಧಿತ ಇಲಾಖೆ 5 ,ಕೃಷಿ ವಿವಿಗಳಿಗೆ 14 ಮತ್ತು ರೈತ ಉತ್ಪಾದಕ ಸಂಸ್ಥೆಗಳಿಗೆ 20 ಮಳಿಗೆಗಳನ್ನು ಹಂಚಿಕೆ ಮಾಡಲಾಗಿದೆ.



ಮಳಿಗೆಯೊಂದರಲ್ಲಿ ಯುವತಿಯರು.

ಸಿರಿಧಾನ್ಯ ಬೆಳೆಯುವ ಪ್ರತಿ ಹೆಕ್ಟೇರ್‌ಗೆ 10 ಸಾವಿರ ರೂ.ಪ್ರೋತ್ಸಾಹಧನ ಸರ್ಕಾರ ನೀಡುತ್ತಿದೆ. ಹಿಂದೆ ಸಿರಿಧಾನ್ಯವೆಂದರೆ ಬಡವರ ಆಹಾರವಾಗಿತ್ತು. ಈಗ ಸಿರಿವಂತರ ಆಹಾರವೂ ಆಗಿದೆ. ಆರೋಗ್ಯದ ಬಗ್ಗೆ ಜನರು ಹೆಚ್ಚು ಕಾಳಜಿ ವಹಿಸುತ್ತಿರುವುದು ಪ್ರಮುಖ ಕಾರಣ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಿರಿಧಾನ್ಯ ಮೇಳ ಆಯೋಜಿಸಲು ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಅವಕಾಶ ನೀಡಿರುವುದಕ್ಕೆ ಧನ್ಯವಾದ ಸಲ್ಲಿಸುತ್ತೇನೆ.

| ಬಿ.ಸಿ.ಪಾಟೀಲ್ ಕೃಷಿ ಸಚಿವ

ಸಿರಿಧಾನ್ಯಕ್ಕೆ ಹೆಚ್ಚು ಪ್ರಾತಿನಿಧ್ಯ

ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಿರಿಧಾನ್ಯಕ್ಕೆ ಹೆಚ್ಚು ಪ್ರಾಶಸ್ತ್ಯ ಸಿಗುತ್ತಿದೆ. ಈ ವರ್ಷ ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷ ಎಂದು ಘೋಷಣೆ ಮಾಡಿದ್ದರಿಂದ ರಾಜ್ಯದ ರೈತರಿಗೆ ಹೆಚ್ಚಿನ ಅನುಕೂಲವಾಗಿದೆ. ಸಿರಿಧಾನ್ಯ ಬೆಳೆಗೆ ನಮ್ಮ ಸರ್ಕಾರ ಆಗತ್ಯ ಪ್ರೋತ್ಸಾಹ ನೀಡುತ್ತಿದೆ. ಕೃಷಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಬದಲಾವಣೆಯಾಗಬೇಕಿದೆ. ಪರಿಣಾಮಕಾರಿಯಾಗಿ ಕೃಷಿ ಕ್ಷೇತ್ರವನ್ನು ಸನ್ನದ್ಧಗೊಳಿಸಬೇಕಿದೆ. ವಿದೇಶಗಳಲ್ಲಿ ಮುಂದಿನ ವರ್ಷದ ಋತುಮಾನದಲ್ಲಿ ಎಷ್ಟು ಮಳೆ ಬೀಳುವುದು, ಬಿತ್ತನೆ, ಉತ್ಪಾದನೆ, ಅಂತಾರಾಷ್ಟ್ರೀಯ ಹಾಗೂ ಸ್ಥಳೀಯ ಮಾರುಕಟ್ಟೆ ಆಧಾರಿಸಿ ವರದಿ ಸಿದ್ಧಪಡಿಸುತ್ತಾರೆ. ಅದೇರೀತಿ ಕೃಷಿ ಇಲಾಖೆ ಮತ್ತು ಕೃಷಿ ಬೆಲೆ ಆಯೋಗ ಕಾರ್ಯನಿರ್ವಹಿಸಬೇಕು. ಒಂದು ವಾರದಲ್ಲಿ ರೈತ ಶಕ್ತಿ ಯೋಜನೆಯನ್ನು ಜಾರಿಗೆ ತರಲಾಗುವುದು ಎಂದು ಬೊಮ್ಮಾಯಿ ಮಾಹಿತಿ ನೀಡಿದರು.

21-01-2023
Vijayavani Pg 10

21-01-2023
Udayavani Pg 07

ಕೃಷಿ ವಿವಿಗಳು ಕ್ಯಾಂಪಸ್ ಬಿಟ್ಟು ಹೊರಬರಲಿ

ಅನ್ನದಾತನ ಬದುಕಿನಲ್ಲಿ ನಿಶ್ಚಿತತೆ ಮೂಡಲು ಸಂಶೋಧನೆ, ಆವಿಷ್ಕಾರಗಳು ಆಗತ್ಯ: ಸಿಎಂ ಬೊಮ್ಮಾಯಿ

ಬೆಂಗಳೂರು: ಅನ್ನದಾತ ರೈತನ ಬದುಕು ಅನಿಶ್ಚಿತತೆಯಿಂದ ಕೂಡಿದ್ದು, ಅದಕ್ಕೆ ನಿಶ್ಚಿತತೆ ತಂದು ಕೊಡುವ ನಿಟ್ಟಿನಲ್ಲಿ ಸಂಶೋಧನೆ ಮತ್ತು ಆವಿಷ್ಕಾರಗಳು ಕೃಷಿ ವಿವಿಗಳಿಂದ ಆಗಬೇಕು. ಅದಕ್ಕಾಗಿ ಕೃಷಿ ವಿವಿಗಳು ಕ್ಯಾಂಪಸ್ ಬಿಟ್ಟು ಹೊರಬರಬೇಕು. ರೈತರ ಜಮೀನುಗಳನ್ನೇ ಕ್ಯಾಂಪಸ್ ಆಗಿ ಮಾಡಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿದರು.

ಕೇಂದ್ರ ಸರ್ಕಾರದ ಪ್ರಸ್ತಾವನೆಯಂತೆ 2023 ಅನ್ನು ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷ ಎಂದು ವಿಶ್ವಸಂಸ್ಥೆಯು ಘೋಷಿಸಿದ ಹಿನ್ನೆಲೆಯಲ್ಲಿ ಅದರ ಆಚರಣೆಯ ಅಂಗವಾಗಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಮೂರು ದಿನಗಳ 'ಸಿರಿಧಾನ್ಯ ಮತ್ತು ಸಾವಯವ-ಅಂತಾರಾಷ್ಟ್ರೀಯ ವಾಣಿಜ್ಯ ಮೇಳ:2023' ಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದರು.

ಹವಾಮಾನ ಮತ್ತು ವೈಜ್ಞಾನಿಕ ಕಾರಣಗಳಿಂದಾಗಿ ರೈತ ಇಂದು ಅನಿಶ್ಚಿತತೆ ಎದುರಿಸುತ್ತಿದ್ದಾರೆ. ಆದ್ದರಿಂದ ಕೃಷಿ ವಿವಿಗಳು ಹಳೆ ಕಾಲದ ಸಂಶೋಧನೆ, ಮಾದರಿ, ಪದ್ಧತಿಗಳನ್ನು ಬಿಟ್ಟು ಈಗಿನ ಆಗತ್ಯತೆಗಳಿಗೆ ತಕ್ಕಂತೆ ರೈತನ ಬದುಕಿಗೆ ನಿಶ್ಚಿತತೆ ತಂದು ಕೊಡುವ ಕೆಲಸ ಆಗಬೇಕು. ಅದಕ್ಕಾಗಿ ಕೃಷಿ ವಿವಿಗಳು ಕ್ಯಾಂಪಸ್ ಬಿಟ್ಟುಹೊರಬರಬೇಕು ಎಂದು ಕರೆ ನೀಡಿದರು.

ಸಮತೋಲನ ಆಗತ್ಯ: ಹಿಂದೆ ಕೃಷಿ ಆಹಾರ ಉತ್ಪಾದನೆಗೆ ಮಾತ್ರ ಸಿಮೀತವಾಗಿತ್ತು. ಹಸಿರು ಕ್ರಾಂತಿ ಬಳಿಕ ಸಂಶೋಧನೆಗಳ ಪರಿಣಾಮ ವಾಣಿಜ್ಯ ಬೆಳೆಗಳಿಗೆ ವಿಸ್ತರಣೆಗೊಂಡಿತು. ಆದರೆ, ಕೃಷಿಯಲ್ಲಿ ಆಹಾರ ಬೆಳೆಗಳ ಬದಲಿಗೆ ವಾಣಿಜ್ಯ ಬೆಳೆಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟರೆ ಮುಂದಿನ ದಿನಗಳಲ್ಲಿ ಆಹಾರದ ಕೊರತೆ ಉಂಟಾಗಲಿದೆ ಎಂದು ಜಾಗತಿಕ ಮಟ್ಟದ ವರದಿಗಳು ಹೇಳುತ್ತಿವೆ. ವಿಶ್ವಮಾನ್ಯ ಸಂಘ-ಸಂಸ್ಥೆಗಳು ಭವಿಷ್ಯ ನುಡಿದಿವೆ. ಹೀಗಾಗಿ, ಕೃಷಿಯಲ್ಲಿ ಆಹಾರ ಬೆಳೆ ಮತ್ತು ವಾಣಿಜ್ಯ ಬೆಳೆಯಲ್ಲಿ ಸಮತೋಲನ ಕಾಯ್ದುಕೊಳ್ಳದಿದ್ದರೆ ಆಹಾರ ಸುರಕ್ಷತೆಯ ಚಕ್ರ ಕಷ್ಟಕ್ಕೆ ಸಿಲುಕಲಿದೆ ಎಂದು ಮುಖ್ಯಮಂತ್ರಿಗಳು ಎಚ್ಚರಿಕೆ ನೀಡಿದರು.

ಕಾರ್ಯಕ್ರಮದಲ್ಲಿ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಶೋಭಾ ಕರಂದ್ಲಾಜೆ, ಕೈಲಾಶ್ ಚೌಧರಿ, ರಾಜ್ಯದ ಕೃಷಿ ಸಚಿವ ಬಿ.ಸಿ. ಪಾಟೀಲ್, ಉತ್ತರ ಪ್ರದೇಶದ ಕೃಷಿ ಸಚಿವ ಸೂರ್ಯಪ್ರತಾಪ್ ಸಿಂಗ್, ಕೃಷಿ ಉತ್ಪನ್ನ ರಾಜ್ಯ ಸಚಿವ ದಿನೇಶ್ ಪ್ರತಾಪ್ ಸಿಂಗ್ ಮತ್ತಿತರರು ಇದ್ದರು.



ಬೆಂಗಳೂರಿನ ಅರಮನೆ ಮೈದಾನದಲ್ಲಿ ಮೂರು ದಿನಗಳ 'ಸಿರಿಧಾನ್ಯ ಮತ್ತು ಸಾವಯವ- ಅಂತಾರಾಷ್ಟ್ರೀಯ ವಾಣಿಜ್ಯ ಮೇಳ'ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ರಾಜ್ಯದ ಕೃಷಿ ಸಚಿವ ಬಿ.ಸಿ. ಪಾಟೀಲ್ ಸೇರಿ ಹಲವರು ಇದ್ದರು.

33 ಲಕ್ಷ ರೈತರಿಗೆ ಸಾಲ

ರಾಜ್ಯ ಸರ್ಕಾರ ಈ ವರ್ಷ 33 ಲಕ್ಷ ರೈತರಿಗೆ ಶೂನ್ಯ ಬಡ್ಡಿಯಲ್ಲಿ ಸಾಲದ ನೆರವು ನೀಡಿದೆ. 3 ಲಕ್ಷ ಹೊಸ ರೈತರಿಗೆ ಸಾಲ ನೀಡಲಾಗಿದ್ದು ಇದೊಂದು ದಾಖಲೆ. ರೈತಶಕ್ತಿ ಯೋಜನೆ 10 ದಿನಗಳಲ್ಲಿ ಪ್ರಾರಂಭಿಸಲಾಗಿದೆ. ಯಶಸ್ವಿನಿ ಯೋಜನೆಯನ್ನು ಮರು ಪ್ರಾರಂಭಿಸಲಾಗಿದೆ. ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ. 10 ಎಚ್.ಪಿ ವರೆಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ ಎಂದು ಸಿಎಂ ಬೊಮ್ಮಾಯಿ ತಿಳಿಸಿದರು.

ಸಿರಿಧಾನ್ಯ ರಾಯಭಾರಿ

ನಾನು ಸಿರಿಧಾನ್ಯ ರಾಯಭಾರಿ ಎಂದು ಹೇಳಿದ ಸಿಎಂ ಬೊಮ್ಮಾಯಿ ಅವರು, ಕಳೆದ 30 ವರ್ಷಗಳಿಂದ ಅಕ್ಕಿ ಅನ್ನ ತಿಂದಿಲ್ಲ. ಸಿರಿಧಾನ್ಯಗಳಾದ ನವಣೆ ಇತ್ಯಾದಿಗಳನ್ನು ಸೇವಿಸುತ್ತಿರುವುದಾಗಿ ಇದೇ ವೇಳೆ ತಿಳಿಸಿದರು.

ಕೃಷಿಗೆ ಬೇಕು ಔಟ್‌ಲುಕ್ ವರದಿ: ಸಿಎಂ

ವಿದೇಶದಲ್ಲಿರುವಂತೆ ನಮ್ಮಲ್ಲೂ ಒಂದು ವರ್ಷ ಮೊದಲೇ ವೈಜ್ಞಾನಿಕ ವರದಿ ಸಿದ್ಧಪಡಿಸಬೇಕು

ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ಸಿರಿಧಾನ್ಯ, ಸಾವಯವ ಮೇಳಕ್ಕೆ ಬೊಮ್ಮಾಯಿ ಚಾಲನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೃಷಿಯಲ್ಲಿನ ಅನಿಶ್ಚಿತತೆ ದೂರ ಮಾಡುವ ನಿಟ್ಟಿನಲ್ಲಿ ವಿದೇಶಗಳಂತೆ ರಾಜ್ಯದಲ್ಲಿಯೂ ಒಂದು ವರ್ಷ ಮುಂಚಿತವಾಗಿ ಔಟ್ ಲುಕ್ ವರದಿಯನ್ನು ವೈಜ್ಞಾನಿಕವಾಗಿ ಸಿದ್ಧಪಡಿಸಬೇಕು ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

ನಗರದ ಅರಮನೆ ಮೈದಾನದಲ್ಲಿ ತ್ರಿಪುರವಾಸಿನಿಯಲ್ಲಿ ನಡೆಯುತ್ತಿರುವ ಅಂತಾರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳ- 2023 ಉದ್ಘಾಟಿಸಿ ಮಾತನಾಡಿದ ಅವರು, ವಿದೇಶಗಳಲ್ಲಿಮುಂದಿನ ಋತುವಿಗೆ ಎಷ್ಟು ಮಳೆಯಾಗಬಹುದು ಎಂದು ಕಳೆದ 10 ವರ್ಷಗಳ ಮಳೆ ಮಾದರಿ ಆಧರಿಸಿ, ಎಷ್ಟು ಬಿತ್ತನೆ, ಉತ್ಪಾದನೆ, ಮಾರುಕಟ್ಟೆಗಳನ್ನು ಪರಿಶೀಲಿಸಿ, ಒಂದು ಬೆಲೆಯನ್ನು ನಿಗದಿ ಮಾಡಿ ಔಟ್ ಲುಕ್ ವರದಿ ತಯಾರಿಸುತ್ತಾರೆ. ಬೆಳೆಯುವ ಬೆಳೆಗೆ ಎಷ್ಟು ಖರ್ಚು ತಗಲಿ, ಎಷ್ಟು ಧಾರಣೆ ದೊರೆಯುತ್ತದೆ ಎಂದು ತಿಳಿಯುತ್ತದೆ. ಆಗ ಲಾಭ ನಷ್ಟಗಳ ಅಂದಾಜಿಸಿ ಮೊತ್ತದೊಳಗೆಯೇ ಖರ್ಚು ಮಾಡುತ್ತಾನೆ. ಈ ವರದಿಯನ್ನು ಇಲಾಖೆ ಹಾಗೂ ಕೃಷಿ ದರ ಆಯೋಗದ ಸಹಯೋಗದೊಂದಿಗೆ ಸಿದ್ಧಪಡಿಸಬೇಕು ಎಂದರು.

ಗ್ರಾಮೀಣ ಆರ್ಥಿಕತೆ ಸುಧಾರಿಸಲು ಗ್ರಾಮೀಣ ಸಾಲ ಪದ್ಧತಿ ಬದಲಾಗಬೇಕು. ರೈತರಿಗೆ 20 ಸಾವಿರ ನೀಡಬೇಕಾದರೆ 7 ರಿಂದ 8 ಸಾವಿರ ನೀಡಲಾಗುತ್ತದೆ. ನಿಖರವಾಗಿ ಸಾಲ ನೀಡಿದರೆ ರೈತ ಮಾರವಾಡಿಗಳ ಎದುರು ಕೈ ಚಾಚುವುದನ್ನು ನಿಲ್ಲಿಸುತ್ತಾನೆ. ಗ್ರಾಮೀಣ ಸಾಲ ಪದ್ಧತಿ ಬದಲಾಗಬೇಕು ಎಂದು ಕೇಂದ್ರ ಹಣಕಾಸು ಸಚಿವರು ಹಾಗೂ ಕೃಷಿ ಸಚಿವರಿಗೆ ಒತ್ತಾಯವನ್ನು ಮಾಡಲಾಗಿದೆ. ನಬಾರ್ಡ್ ಸಾಲ ಪದ್ಧತಿಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲು ಒತ್ತಾಯಿಸಲಾಗಿದೆ. ಈ ಕೆಲಸಗಳಾದರೆ ರೈತರ ಬದುಕಿಗೆ ನಿಶ್ಚಿತತೆಯನ್ನು ತರಬಹುದು ಎಂದರು.



ಬೆಂಗಳೂರಿನಲ್ಲಿ ಸಿರಿಧಾನ್ಯ ಮೇಳ ಉದ್ಘಾಟಿಸಿದ ಸಿಎಂ ಬೊಮ್ಮಾಯಿ ಹಾಗೂ ಸಚಿವರು

ಯೋಗ, ಆಯುಷ್ ವೈದ್ಯ ಪದ್ಧತಿ ಬಳಿಕ ಸಿರಿಧಾನ್ಯವನ್ನು ವಿಶ್ವಕ್ಕೆ ಪರಿಚಯಿಸಿದ ಕೀರ್ತಿ ಪ್ರಧಾನಿ ಮೋದಿ ಅವರಿಗೆ ಸಲ್ಲುತ್ತದೆ. ಸಿರಿಧಾನ್ಯಕ್ಕೆ ವಿಶ್ವದೆಲ್ಲೆಡೆ ಬೇಡಿಕೆ ಇದ್ದು ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಸಾವಯವ ಕೃಷಿಗೆ ಕೃಷಿಕರು ಆದ್ಯತೆ ನೀಡಬೇಕು.

• **ಶೋಭಾ ಕರಂದ್ಲಾಜೆ** ಕೇಂದ್ರ ಸಚಿವೆ

ಸರ್ಕಾರವು ಆರೋಗ್ಯ ವ್ಯವಸ್ಥೆಗೆ ಖರ್ಚು ಮಾಡುವ ಹಣದಲ್ಲಿ ಒಂದಿಷ್ಟು ಭಾಗವನ್ನು ಸಿರಿಧಾನ್ಯ ಕೃಷಿಗೆ ಪ್ರೋತ್ಸಾಹ ನೀಡುವ ಯೋಜನೆ ವಿನಿಯೋಗಿಸಿದರೆ ಸಮಾಜದಲ್ಲಿ ರೋಗಿಗಳನ್ನು ಕಡಿಮೆ ಮಾಡಬಹುದು.

• **ಪ್ರಹ್ಲಾದ್ ಜೋಶಿ** ಸಂಸದೀಯ ವ್ಯವಹಾರ ಕೇಂದ್ರ ಸಚಿವ.

ಕೃಷಿ ವಿವಿಗಳು ಕ್ಯಾಂಪಸ್ ಬಿಟ್ಟು ಬನ್ನಿ: ಹವಾಮಾನದ ಬದಲಾವಣೆಗೆ ಅನುಗುಣವಾಗಿ ಕೃಷಿ ಕ್ಷೇತ್ರವನ್ನು ಸಜ್ಜುಗೊಳಿಸಲು ಕೃಷಿ ವಿಶ್ವವಿದ್ಯಾಲಯಗಳು ಸನ್ನದ್ಧವಾಗಬೇಕು. ಕೃಷಿ ಕ್ಷೇತ್ರದಲ್ಲಿನ ಇಂದಿನ ಸವಾಲುಗಳಾದ ಮಣ್ಣಿನ ಸವಕಳಿ, ಹೆಚ್ಚಿನ ನೀರು ಬಳಕೆ, ಜವುಳು, ರಾಸಾಯನಿಕದಿಂದ ಆಗುತ್ತಿರುವ ಸಮಸ್ಯೆ, ಕಳಪೆ ಹಾಗೂ ನಕಲಿ ಬೀಜ ಮಾರಾಟ ತಡೆಯುವ ಬಗ್ಗೆ ವಿದ್ಯಾರ್ಥಿಗಳು ಸಂಶೋಧನೆಗಳನ್ನು ಮಾಡಬೇಕು. ಕೃಷಿ ವಿವಿಗಳು ಕ್ಯಾಂಪಸನ್ನು ಬಿಟ್ಟು ಹೊರ ಬನ್ನಿ ರೈತನ ಹೊಲವನ್ನೇ ಕ್ಯಾಂಪಸ್ ರೀತಿ ಮಾಡಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಕೃಷಿ ಸಚಿವ ಬಿ.ಸಿ.ಪಾಟೀಲ್ ಮಾತನಾಡಿ, ಸಿರಿಧಾನ್ಯ ಪ್ರತಿ ಹೆಕ್ಟೇರ್‌ಗೆ 10 ಸಾವಿರ ರು. ಪ್ರೋತ್ಸಾಹ ಧನವನ್ನು ರೈತರಿಗೆ ನೀಡಲಾಗುತ್ತಿದೆ. ಸಿರಿಧಾನ್ಯ ಬಳಕೆ ಹೆಚ್ಚುತ್ತಿದ್ದು, ಪ್ರಸಕ್ತ ಬೆಂಗಳೂರಿನ 80 ಹೋಟೇಲ್‌ಗಳಲ್ಲಿ ಸಿರಿಧಾನ್ಯ ಪೂರೈಕೆಯಾಗುತ್ತಿದೆ ಎಂದು ಹೇಳಿದರು.

ಮೇಳದಲ್ಲಿ 300 ಮಳಿಗೆ

ಮೂರು ದಿನಗಳ ಸಿರಿಧಾನ್ಯ ಮೇಳದಲ್ಲಿ 300 ಮಳಿಗೆಗಳಿದ್ದು, ರಾಜ್ಯ ಮತ್ತು ಹೊರ ರಾಜ್ಯಗಳ ಸಿರಿಧಾನ್ಯಗಳ ಆಹಾರ ಪದಾರ್ಥಗಳು ಒಂದೆ ಸೂರಿನಡಿ ಸಿರಿಧಾನ್ಯ ಪ್ರಿಯರಿಗೆ ದೊರೆಯಲಿದೆ. ಸಾವಯವ ಉತ್ಪನ್ನಗಳ ಪ್ರದರ್ಶನ, ಅಂತಾರಾಷ್ಟ್ರೀಯ ಕೃಷಿ ಸಂಸ್ಥೆಗಳು ಸೇರಿ 10ಕ್ಕೂ ಅಧಿಕ ರಾಜ್ಯಗಳ ಉತ್ಪನ್ನ ಮಳಿಗೆ ಹಾಕಲಾಗಿದೆ. ಮಂಡ್ಯ, ಮೈಸೂರು, ಹಾವೇರಿ, ರಾಮನಗರ, ವಿಜಯಪುರ, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ನಾಡಿನ ವಿವಿಧ ಭಾಗಗಳ ರೈತರು ಸಿರಿಧಾನ್ಯ ಮೇಳದಲ್ಲಿ ಭಾಗವಹಿಸಿ ಸಿರಿಧಾನ್ಯಗಳ ಬಗ್ಗೆ ಮಾಹಿತಿ ಪಡೆದರು. ರೈತರ ಕಾರ್ಯಗಾರ ಜರುಗಿದವು. ಅಗತ್ಯ ಬೆಂಗಳೂರು ಮೂಲದ ದೇಶಿ ನ್ಯೂಟ್ರಿ ಮಳಿಗೆ, ಸಿರಿಧಾನ್ಯ ಪಿಜ್ಜಾ ಬರ್ಗರ್ ಮಳಿಗೆ ಆಕರ್ಷಣೀಯವಾಗಿದ್ದವು.

21-01-2023
Kannadaprabha
Pg 08

21-01-2023
Prajavani
Pg 3A

ಅಂತರರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳ • ಆಹಾರ ಪದಾರ್ಥಗಳ ರಫ್ತಿನಲ್ಲಿ ಭಾರತಕ್ಕೆ 9ನೇ ಸ್ಥಾನ

ಸಿರಿಧಾನ್ಯ ರಫ್ತಿಗೆ ಯೋಜನೆ: ಸಚಿವೆ ಶೋಭಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿರಿಧಾನ್ಯಗಳನ್ನೂ ವಿದೇಶಕ್ಕೆ ರಫ್ತು ಮಾಡಲು ಕೇಂದ್ರವು ಯೋಜನೆ ರೂಪಿಸಿದೆ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಕೃಷಿ ಇಲಾಖೆ ಶುಕ್ರವಾರ ನಗರದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳದಲ್ಲಿ ಮಾತನಾಡಿದ ಅವರು, 'ಆಹಾರ ಪದಾರ್ಥಗಳ ರಫ್ತಿನಲ್ಲಿ ಭಾರತವು ವಿಶ್ವದಲ್ಲಿಯೇ 9ನೇ ಸ್ಥಾನದಲ್ಲಿದೆ. ಸ್ಥಳೀಯವಾಗಿ ಬೆಳೆಯುವ ಜೋಳ, ರಾಗಿ, ಊದಲು, ನವಣೆ, ಹಾರಕ, ಕೊರಲೆ, ಸಾಮೆಗೆ ಅಂತರರಾಷ್ಟ್ರೀಯ ಮಾರುಕಟ್ಟೆ ಕಲ್ಪಿಸಲು ತೀರ್ಮಾನಿಸಿದೆ. ಗುಣಮಟ್ಟದ ಸಿರಿಧಾನ್ಯ ಬೆಳೆದರೆ ಅಂತರರಾಷ್ಟ್ರೀಯ ಮಾರುಕಟ್ಟೆ ಕಲ್ಪಿಸಲು ಸಾಧ್ಯವಾಗಲಿದೆ. ಕೀಟನಾಶಕ ಹಾಗೂ ರಸಗೊಬ್ಬರ ಬಳಸದಿರುವ ಸಿರಿಧಾನ್ಯಕ್ಕೆ ಬೇಡಿಕೆ ಹೆಚ್ಚಿದೆ' ಎಂದು ಹೇಳಿದರು.

'ದೇಶದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಆಹಾರ ಉತ್ಪಾದನೆಯಾಗುತ್ತಿದೆ. ದೇಶದಲ್ಲಿ 21.4 ಕೋಟಿ ಟನ್ ಆಹಾರ ಹಾಗೂ 34.5 ಕೋಟಿ ಟನ್ ಹಣ್ಣು ಹಾಗೂ ತರಕಾರಿ ಉತ್ಪಾದನೆಯಾಗುತ್ತಿದೆ' ಎಂದು ಹೇಳಿದರು.

ಕೃಷಿ ಹಾಗೂ ರೈತ ಕಲ್ಯಾಣ ರಾಜ್ಯ ಸಚಿವ ಕೈಲಾಶ್ ಚೌಧರಿ ಮಾತನಾಡಿ, 'ಕೃಷಿ ಕ್ಷೇತ್ರದಲ್ಲಿ ಹೊಸ ತಂತ್ರಿಕತೆ ಜಾರಿಗೊಳಿಸಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ. ರಫ್ತು ಹೆಚ್ಚಿದರೆ ರೈತರ ಬದುಕು ಹಸನಾಗಲಿದೆ. ಸಾವಯವ ಕೃಷಿಗೆ ರೈತರು ಹೆಚ್ಚಿನ ಆದ್ಯತೆ ನೀಡಬೇಕು' ಎಂದರು.

ಮೇಳಕ್ಕೆ ಚಾಲನೆ ನೀಡಿದ ಸಿಎಂ ಬಸವರಾಜ ಬೊಮ್ಮಾಯಿ ಮಾತನಾಡಿ, 'ರೈತರ ಬದುಕಿನ ಅನಿಶ್ಚಿತತೆ ಬದಲಾಯಿಸಲು ವೈಜ್ಞಾನಿಕ ವರದಿ ಸಿದ್ಧಪಡಿಸಬೇಕು. ಬೇರೆ ದೇಶಗಳಲ್ಲಿ 10 ವರ್ಷದ ಮಳೆ ಪ್ರಮಾಣ, ಬಿತ್ತನೆ ಪ್ರಮಾಣ, ಆಹಾರ ಪದಾರ್ಥಗಳ ಉತ್ಪಾದನೆ, ಅಂತರರಾಷ್ಟ್ರೀಯ ಮಾರುಕಟ್ಟೆ, ಸ್ಥಳೀಯ ಮಾರುಕಟ್ಟೆ ಆಧರಿಸಿ ವರದಿ ತಯಾರಿಸುತ್ತಾರೆ. ರಾಜ್ಯದಲ್ಲೂ ಆ ಮಾದರಿಯಲ್ಲಿಯೇ ವರದಿ ತಯಾರಿಸಬೇಕು' ಎಂದು ಸೂಚಿಸಿದರು.

'ಗ್ರಾಮೀಣ ಪ್ರದೇಶದಲ್ಲಿ ಸಾಲ ನೀಡುವ ಪದ್ಧತಿ ಬದಲಾಗಬೇಕಾಗಿದೆ. ರಾಷ್ಟ್ರ ಸರ್ಕಾರ ಈ ವರ್ಷ 33 ಲಕ್ಷ ರೈತರಿಗೆ ಶೂನ್ಯ ಬಡ್ಡಿಯಲ್ಲಿ ಸಾಲದ ನೆರವು ನೀಡಿದ್ದು, 3 ಲಕ್ಷ ಹೊಸ ರೈತರಿಗೆ ಸಾಲ ನೀಡಲಾಗಿದೆ' ಎಂದು ಹೇಳಿದರು.



ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿರುವ 'ಅಂತರರಾಷ್ಟ್ರೀಯ ಸಿರಿಧಾನ್ಯ ಮೇಳ'ದಲ್ಲಿ ರಾಗಿ ರಾತಿಯನ್ನು ಮಹಿಳೆಯರು ಅಲಂಕರಿಸಿದರು – ಪ್ರಜಾವಾಣಿ ಚಿತ್ರ

ಮೇಳದಲ್ಲಿ ತರಹೇವಾರಿ ಉತ್ಪನ್ನಗಳು

ಬೆಂಗಳೂರು: ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷದ ಅಂಗವಾಗಿ ಕೃಷಿ ಇಲಾಖೆ ಅರಮನೆ ಮೈದಾನದಲ್ಲಿ ಆಯೋಜಿಸಿರುವ ಸಿರಿಧಾನ್ಯ ಹಾಗೂ ಸಾವಯವ ಮೇಳ ಸಿರಿಧಾನ್ಯ ಪ್ರಿಯರನ್ನು ಆಕರ್ಷಿಸುತ್ತಿದೆ.

ವಸ್ತು ಪ್ರದರ್ಶನದಲ್ಲಿ ಹತ್ತಾರು ಮಳಿಗೆಗಳಿವೆ. ಅದರಲ್ಲಿ ಕೆಲವು ಮಳಿಗೆಗಳಲ್ಲಿ ಸಿರಿಧಾನ್ಯ, ಸಾವಯವ ಹಾಗೂ ನೈಸರ್ಗಿಕ ಉತ್ಪನ್ನಗಳು ಮಹತ್ವ ಸಾರುತ್ತಿವೆ.

ನೈಸರ್ಗಿಕ ಕೃಷಿ, ಪರಿಸರ ಸ್ನೇಹಿ ಉತ್ಪನ್ನಗಳು, ದೇಸೀಯ ಬಿತ್ತನೆ ಬೀಜಗಳ ಸಂರಕ್ಷಣೆ ಕುರಿತು ಮಾಹಿತಿ ತಿಳಿಸುವ ಮಳಿಗೆಗಳೂ ವಸ್ತು ಪ್ರದರ್ಶನದಲ್ಲಿವೆ. ಕೇರಳ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ಮಣಿಪುರ, ಅಸ್ಸಾಂ, ಅರುಣಾಚಲ ಪ್ರದೇಶದ ಮಾರಾಟಗಾರರು ಸಾವಯವ ಹಾಗೂ ಸಿರಿಧಾನ್ಯ ಉತ್ಪನ್ನಗಳನ್ನು ಪ್ರದರ್ಶಿಸಿದ್ದಾರೆ.

ಈ ಸಮ್ಮೇಳನವು 'ಸಿರಿಧಾನ್ಯ ಸಾವಯವ ಮತ್ತು ನೈಸರ್ಗಿಕ ಕೃಷಿ - ಸವಾಲುಗಳ ನಡುವೆ ಅವಕಾಶಗಳು' ಎಂಬ ವಿಷಯ ಆಧರಿಸಿ ನಡೆಯುತ್ತಿದ್ದು, ಸ್ಥಳದಲ್ಲೇ ಗಾಣದಿಂದ ಎಣ್ಣೆ ತಯಾರಿಕೆ, ದೇಸಿ ತುಪ್ಪ, ಕೊಡಗಿನ ಜೇನು, ಕೊಡಗು ಹಾಗೂ ಚಾಮರಾಜನಗರದ ಆದಿವಾಸಿಗಳ ತಯಾರಿಸಿದ ಕಾಫಿ ಪುಡಿ ಸೇರಿದಂತೆ ತರಹೇವಾರಿ ಪದಾರ್ಥಗಳು ಲಭ್ಯವಿದೆ.

ಆಹಾರ ಧಾನ್ಯಗಳ ಉತ್ಪಾದನೆ ಹಾಗೂ ವಾಣಿಜ್ಯ ಬೆಳೆಗಳ ನಡುವೆ ಸಮತೋಲನ ಕಾಯ್ದುಕೊಳ್ಳದಿದ್ದರೆ ಆಹಾರ ಭದ್ರತೆಗೆ ತೊಂದರೆಯಾಗಲಿದೆ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಔಷಧಿ ಕಾಂಶದ ಬಗ್ಗೆ ಚಿಂತಿಸುವ ಕಾಲ ಕತ್ತರವಾಗಿದೆ.
₹ 25 ಕೋಟಿ ವೆಚ್ಚದಲ್ಲಿ ರಾಯಚೂರಿನಲ್ಲಿ ಸಿರಿಧಾನ್ಯ ಪಾರ್ಕ್ ನಿರ್ಮಿಸಲಾಗುವುದು
ಬಿ.ಸಿ.ಪಾಟೀಲ, ಕೃಷಿ ಸಚಿವ

Karnataka requires an outlook report to remove uncertainty in agriculture: Bommai

The Hindu Bureau
BENGALURU

Karnataka should prepare an outlook report that would predict rainfall, give an idea about the total sowing requirement, expected productivity, market demand in local and international markets, and the price mechanism to remove uncertainty around farming, said Chief Minister Basavaraj Bommai.

Speaking at the International Millet and Organic Mela-2023 that commenced here on Friday, the Chief Minister said other countries prepared such outlook reports and their farmers communities benefited out of them.



The International Millet and Organic Mela-2023 commenced at Palace Grounds in Bengaluru on Friday. SUDHAKARA JAIN

"We have to work on a similar report to work out the cost of cultivation of each crop so that the farmers can cultivate a particular crop within that budget," he said. It has to be prepared in consultation with the Department of Agriculture, Agricultural Price Commission, and stakeholders in the farming community, Mr. Bommai insisted.

A majority of people, in the State, consume jowar and ragi and they are distributed through PDS in the last three years, said Mr. Bommai.

"The agricultural universities must come out of the campus and help farmers grow millets and commercial crops," Mr. Bommai said.

Affecting food safety

Agriculture scientists, who spoke at the millet mela, opined that the food safety of the country would be affected in the coming days if the balance between the commercial crops and the agricultural crops was not maintained.

21-01-2023
Hindu
Pg 05

CM promises to restore glory of garden city as Republic Day flower show kicks off

The Hindu Bureau
BENGALURU

Steps will be taken to restore the garden city to its former glory, announced Chief Minister Basavaraj Bommai on Friday, as he inaugurated the 213th edition of the Republic Day flower show, organised by the Horticulture Department at Lalbagh Botanical Garden.

"Necessary steps will be initiated to protect the name of garden city permanently by maintaining Lalbagh, Cubbon Park and other parks, which are under the control of BBMP, and by creating new gardens on the city's outskirts and by growing more trees," he said, adding that with a green budget under which ₹100 crore has been earmarked to extend the green cover in Karnataka, the government has taken up the task of converting hilly regions into green areas for the first time.





The annual flower show, at Lalbagh Botanical Garden in Bengaluru, began on Friday. K. MURALI KUMAR

He added that along with extending the forest cover, the government is also taking steps to increase the production of horticulture crops. He said farms would be created to promote horticulture on a larger scale, and mentioned that there are plans to earmark funds for it in the upcoming Budget.

The theme of this year's Republic Day flower show is 'History of Bengaluru'. The centrepiece of the flower show, which depicted glimpses of Bengaluru, is a major attraction.

"I really enjoyed coming here. It is my first visit to the flower show. I love the different colours of flowers, and it was easy to know their background by reading the boards," said Sanju, a visitor. Visitors to Lalbagh were also briefed about the sorting of trash by volunteers from Saahas.

For more information visit
University Library Website
Web - uasbagrilibindia.org
E-mail- librarian@uasbangalore.edu.in

ಸಿರಿಧಾನ್ಯಗಳ ಜತೆಗೆ ರೈತಸಿರಿ ಅನಾವರಣ





ಬೆಂಗಳೂರು: ನೇರಳೆ ಹಣ್ಣಿನ ಜ್ಯೂಸ್‌ನ ರುಚಿ ಸವಿದಿರಬಹುದು. ಆದರೆ ನೀವು ನೇರಳೆ ಹಣ್ಣಿನ ಗ್ರೀನ್ ಟೀ ಸೇವನೆ ಮಾಡಿದ್ದೀರಾ? ಎಳನೀರನ್ನು ಸೇವಿಸಿರಬಹುದು. ಆದರೆ ಪೌಡರ್‌ನಿಂದ ತಯಾರಾಗುವ ಎಳನೀರಿನ ರುಚಿ ನೋಡಿದ್ದೀರಾ? ಇವೆಲ್ಲವುಗಳನ್ನು ಸವಿಯಲು ಬಯಸಿದರೆ ನೀವು ಅರಮನೆ ಮೈದಾನದಲ್ಲಿ ಶುಕ್ರವಾರ ಆರಂಭವಾಗಿರುವ ಸಿರಿಧಾನ್ಯ ಮತ್ತು ಸಾವಯವ ಅಂತಾರಾಷ್ಟ್ರೀಯ ವಾಣಿಜ್ಯ ಮೇಳಕ್ಕೆ ಒಮ್ಮೆ ಭೇಟಿ ನೀಡಿ.

ಅರಮನೆ ಮೈದಾನದಲ್ಲಿ ಶುಕ್ರವಾರದಿಂದ ಆರಂಭವಾಗಿರುವ 3 ದಿನಗಳ ಸಿರಿಧಾನ್ಯ ಮತ್ತು ಸಾವಯವ ಮೇಳದಲ್ಲಿ ಸಿರಿಧಾನ್ಯಗಳ ಜತೆಗೆ ರೈತಸಿರಿ ಅನಾವರಣಗೊಂಡಿದೆ. ಇದರಲ್ಲಿ ನೇರಳ ಹಣ್ಣಿನಿಂದ ತಯಾರಿಸಿ ಗ್ರೀನ್ ಟೀ ಮತ್ತು ಎಳನೀರಿನಿಂದ ತಯಾರಿಸಿ ಎಳನೀರು ಪೌಂಡರ್ ಆಕರ್ಷಣೆಯಾಗಿದೆ.

ನೇರಳೆ ಹಣ್ಣಿನಲ್ಲಿ ವಿಟಮಿನ್ ಸಿ, ವಿಟಮಿನ್ ಕೆ, ಪೊಟ್ಯಾಶಿಯಂ, ಕ್ಯಾಲ್ಸಿಯಂ, ನಾರು ಸೇರಿದಂತೆ ಹಲವು ಪೌಷ್ಟಿಕಾಂಶಗಳು ಅಡಕವಾಗಿವೆ. ಕ್ಯಾನ್ಸರ್ ನಿವಾರಕ ಅಂಶಗಳು ನೇರಳೆ ಹಣ್ಣಿನಲ್ಲಿದ್ದು ಜತೆಗೆ ಅಧಿಕ ತೂಕ ಇಳಿಸುವ ಗುಣವನ್ನೂ ಹೊಂದಿದೆ. ರಾಜಸ್ಥಾನದ ಜೈಪುರ್ ಮೂಲದ ಜೋವಕಿ ಆಗ್ರೋ ಫುಡ್ ಇಂಡಿಯಾ ಸಂಸ್ಥೆ ಇದೀಗ 'ಜಾಮೂನ್ ಗ್ರೀನ್ ಟೀ' ಮಾರುಕಟ್ಟೆಗೆ ಪರಿಚಯಿಸಿದೆ.

ನೇರಳೆ ಹಣ್ಣಿನಿಂದ ಮಾಡಲಾದ ಗ್ರೀನ್ ಟೀ ಸೇವನೆ ತೂಕ ಇಳಿಕೆಗೆ ಸಹಾಯವಾಗಲಿದೆ. ಜತೆಗೆ ಚರ್ಮದ ಆರೋಗ್ಯವನ್ನು ಉತ್ತೇಜಿಸಲಿದೆ. ದೇಹದೊಳಗಿನ ರಕ್ತ-ಸಕ್ಕರೆ ಮಟ್ಟವನ್ನು ನಿರ್ವಹಿಸಿ ಜೀರ್ಣಕಾರಿ ಸಮಸ್ಯೆಗಳನ್ನು ನಿವಾರಿಸಲಿದೆ. ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಕಾಪಾಡಿಕೊಳ್ಳುವುದು ಮತ್ತು ಉಸಿರಾಟದ ತೊಂದರೆ ನಿವಾರಿಸಲು ಇದು ಸಹಕಾರಿ ಆಗಲಿದೆ ಎಂದು ಸಂಸ್ಥೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಜತೆಗೆ ನೇರಳೆ ಹಣ್ಣಿನಿಂದ ಮಾಡಿರುವ ವಿನೆಗರ್ ಕೂಡ ನೇರಳೆ ಹಣ್ಣಿನ ಪ್ರಿಯರಿಗೆ ದೊರೆಯಲಿದೆ. ಇದರಲ್ಲಿ ಕಬ್ಬಿಣ ಮತ್ತು ಮಿಟಮಿನ್ ಸಿ ಇರುವುದರಿಂದ ದೇಹದಲ್ಲಿನ ರಕ್ತದ ಹೆಚ್ಚಳಕ್ಕೆ ಕಾರಣವಾಗಲಿದೆ. ನೇರಳೆ ಹಣ್ಣಿನ ಆರ್ಕ್, ಫ್ಲೆಕ್ಸ್ ಬೀಜದ ಪುಡಿಗಳನ್ನು ಕೂಡ ಸಿದ್ಧಪಡಿಸಲಾಗಿದೆ. ಸಿರಿಧಾನ್ಯ ಮೇಳದಲ್ಲಿ ಜನರು ನೇರಳೆ ಹಣ್ಣಿನಿಂದ ಮಾಡಲಾದ ಹಲವು ಉತ್ಪನ್ನಗಳ ಬಗ್ಗೆ ಮಾಹಿತಿ ಪಡೆದರು. ನೇರಳೆ ಹಣ್ಣಿನಲ್ಲಿ ಇಷ್ಟೆಲ್ಲ ಪದಾರ್ಥಗಳನ್ನು ತಯಾರಿಸುತ್ತಾರೆ ಎಂಬುವುದನ್ನು ಕೇಳಿ ಅಚ್ಚರಿಯಾಯಿತು ಎಂದು ಹಾವೇರಿ ಮೂಲದ ರೈತ ಹಣಮಂತಪ್ಪ ಹೇಳಿದರು.

5 ನಿಮಿಷದಲ್ಲಿ ಎಳನೀರು ರೆಡಿ: ತೆಂಗು ಬೆಳೆಗಾರರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಫುಡಿಯೋ ಫಿಟ್ ಎಂಬ ವಿವಿಧ ಆಹಾರೋತ್ಪಾದನ ಸಂಸ್ಥೆ ಆಧುನಿಕ ತಂತ್ರಜ್ಞಾನ ಬಳಸಿ ಎಳನೀರು ಪೌಡರ್ ಮಾರುಕಟ್ಟೆಗೆ ಪರಿಚಯಿಸಿದ್ದು ಸಿರಿಧಾನ್ಯ ಮೇಳದಲ್ಲಿ ಗಮನ ಸೆಳೆಯುತ್ತಿದೆ. ಪ್ರತಿ 15 ಗ್ರಾಂ. ಪ್ಯಾಕ್‌ನಲ್ಲಿನ ಎಳನೀರು ಪೌಡರ್‌ಗೆ 200 ಮಿ.ಲೀಟರ್ ನೀರು ಬೆರೆಸಿದರೆ ಎಳನೀರು 5 ನಿಮಿಷದಲ್ಲಿ ಸಿದ್ಧವಾಗುತ್ತದೆ ಎಂದು ಫುಡಿಯೋ ಫಿಟ್‌ನ ಗಾಯತ್ರಿ ಮಾಹಿತಿ ನೀಡಿದರು.

ಈ ಉತ್ಪನ್ನವನ್ನು ಸಂಪೂರ್ಣವಾಗಿ ಎಳನೀರಿನಿಂದ ಮಾಡಲಾಗಿದೆ. ಫ್ರೀಜ್ ಡ್ರೈನ್ ತಂತ್ರಜ್ಞಾನ ಬಳಸಿ ನೀರಿನ ಅಂಶವನ್ನು ತೆಗೆಯಲಾಗುವುದು. ಇದರಲ್ಲಿ ಸಾಲ್ಟ್ ಜತೆ ಪೋಟಾಸಿಯಂ ಮತ್ತು ಸೋಡಿಯಂ ಕೂಡ ಇರುತ್ತದೆ. ಅದನ್ನು ಸ್ಯಾಚೆಟ್ಸ್ ಫ್ರೀಜರ್ ಮಾಡಲಾಗುದೆ. ಒಂದು ವರ್ಷದ ವರೆಗೂ ಗ್ರಾಹಕರು ಇದನ್ನು ಬಳಕೆ ಮಾಡಬಹುದಾಗಿದೆ ಎಂದು ಹೇಳುತ್ತಾರೆ.

ಕ್ಷಣ ಮಾತ್ರದಲ್ಲಿ ತಯಾರಾಗುವ ಈ ಎಳೆನೀರು ತಾಜಾತನದ ಅನುಭವ ನೀಡಲಿದೆ. ತಮಗೆ ಬೇಕಾದ ವೇಳೆ ಎಷ್ಟು ಬೇಕೋ ಅಷ್ಟನ್ನು ಗ್ರಾಹಕರು ಬಳಸಬಹುದು ಎಂದು ಫುಡಿ ಫಿಟ್‌ನ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದರು.

ಒಂದೇ ಸೂರಿನಡಿ ವೈವಿಧ್ಯಮಯ ಸಿರಿಧಾನ್ಯ

ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಕೃಷಿ ಇಲಾಖೆ ಹಮ್ಮಿಕೊಂಡಿರುವ ಸಿರಿಧಾನ್ಯ ಮೇಳದಲ್ಲಿ ಸಿರಿ ಸುಗ್ಗಿ ಅನಾವರಣಗೊಂಡಿದೆ. ಕರ್ನಾಟಕ ಫೆವಿಲಿಯನ್ ವೈವಿಧ್ಯಮ ತಿನಿಸುಗಳ ಪ್ರದರ್ಶನಕ್ಕೆ ಸಾಕ್ಷಿಯಾಗಿದೆ. ಶುಕ್ರವಾರದಿಂದ ಆರಂಭವಾಗಿರುವ ಈ ಮೇಳದಲ್ಲಿ ರೈತರ, ಖರೀದಿದಾರರ, ಮಾರಾಟಗಾರರ ಸಮಾಗಮವಾಗಿದ್ದು, ನಾಡಿನ ಸಿರಿಧಾನ್ಯ ಆಹಾರ ಪದಾರ್ಥಗಳಷ್ಟೇ ಅಲ್ಲ, ಹೊರ ರಾಜ್ಯಗಳ ಸಿರಿಧಾನ್ಯಗಳ ಆಹಾರ ಪದಾರ್ಥಗಳು ಒಂದೇ ಸೂರಿನಡಿ ಸಿರಿಧಾನ್ಯ ಪ್ರಿಯರಿಗೆ ದೊರೆಯಲಿದೆ.

- **ಎಳನೀರಿನ ಪೌಡರ್, ನೇರಳೆ ಗ್ರೀನ್ ಟೀ ಆಕರ್ಷಣ**



ಮೇಳದ ಆರಂಭದ ದಿನದಂದೇ ಮಳಿಗೆಗಳಲ್ಲಿ ಸಹಸ್ರಾರು ಜನರು ಕಂಡುಬಂದರು. ರಾಗಿ, ಹಾರಕ, ಸಾಮೆ, ಊದಲು, ಕೊರಲು, ಬರಗು, ನವಣೆಯಂತಹ ವೈವಿಧ್ಯಮಯ ಸಿರಿಧಾನ್ಯಗಳಿಂದ ತಯಾರಿಸಲಾಗಿದ್ದ ಸಿಹಿ ತಿನಿಸುಗಳು ಯುವ ಸಮೂಹವನ್ನು ಆಕರ್ಷಿಸಿತು. ಕೃಷಿ ವಿವಿಯ ಕಾಲೇಜು ವಿದ್ಯಾರ್ಥಿಗಳು ಕೂಡ ಸಿರಿಧಾನ್ಯ ಮಳಿಗೆಗಳಿಗೆ ಭೇಟಿ ನೀಡಿ ಸಿರಿಧಾನ್ಯಗಳ ಬಗ್ಗೆ ಮಾಹಿತಿ ಪಡೆಯುತ್ತಿದ್ದದ್ದು ವಿಶೇಷವಾಗಿತ್ತು.

ಪುಟಾಣಿಗಳು ಸಿರಿಧಾನ್ಯದಿಂದ ಮಾಡಿದ್ದ ಚಕ್ಕುಲಿ, ರಾಗಿ ಲಡ್ಡು, ರಾಗಿ, ನವಣೆ ಶ್ಯಾವಿಗೆ, ರಾಗಿ ಅಂಬಲಿ, ಸಜ್ಜೆ ಅಂಬಲಿ ಸೇರಿದಂತೆ ಮತ್ತಿತರರ ಸಿಹಿ ತಿನಿಸುಗಳನ್ನು ತಿಂದು ಸಂಭ್ರಮಿಸಿದರು. ಮೈಸೂರು ದೋಸೆ, ಮೆಣಸು ಪೊಂಗಲ್, ಮಿಲೆಟ್ ಮುರುಕ್ಕು ಮಿಲೆಟ್ ಖಾರಾ ಚಿವ್ವಾ ಮಿಲೆಟ್ಸ್ ಬೈಟ್ಸ್, ಮಿಲೆಟ್ಸ್ ಸಿಹಿ ಚಿವ್ವಾ ರುಚಿ ಸವಿದರು. ಈ ವೇಳೆ ಮಾತನಾಡಿ ಬೆಂಗಳೂರು ಕೃಷಿ ವಿವಿ ವಿದ್ಯಾರ್ಥಿನಿ ಸಂಜೋತಾ, ಸಿರಿಧಾನ್ಯಗಳಲ್ಲಿ ಇಷ್ಟೆಲ್ಲ ಬಗೆಯ ಸಿಹಿ ತಿನಿಸು ಮತ್ತು ಆಹಾರ ಪದಾರ್ಥಗಳನ್ನು ತಯಾರಿಸುತ್ತಾರೆ ಎಂಬ ಕಲ್ಪನೆ ಇರಲಿಲ್ಲ, ಮೇಳಕ್ಕೆ ಬಂದ ಮೇಲೆ ಸಿರಿಧಾನ್ಯಗಳ ಆಹಾರ ಲೋಕವೇ ಅನಾರವಣಗೊಂಡಿರುವುದನ್ನು ನೋಡಿ ಖುಷಿಯಾಯಿತು ಎಂದರು.

ಮಂಡ್ಯ, ಮೈಸೂರು, ರಾಮನಗರ, ಹಾವೇರಿ, ವಿಜಯಪುರ, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ನಾಡಿನ ವಿವಿಧ ಭಾಗಗಳ ರೈತರು ಸಿರಿಧಾನ್ಯ ಮೇಳದಲ್ಲಿ ಭಾಗವಹಿಸಿ ಸಿರಿಧಾನ್ಯಗಳ ಬಗ್ಗೆ ಮಾಹಿತಿ ಪಡೆದರು. ಮಧ್ಯಾಹ್ನದ ವೇಳೆಯೇ ಎರಡು ಸಾವಿರಕ್ಕೂ ಹೆಚ್ಚು ರೈತರು ನೋಂದಣಿ ಕೇಂದ್ರದಲ್ಲಿ ಹೆಸರು ನೋಂದಣಿ ಮಾಡಿಕೊಂಡಿದ್ದರು. ಇದಲ್ಲಿ ಹಾಸನ ಮತ್ತು ದಾವಣಗೆರೆ ಜಿಲ್ಲೆಯ ರೈತರು ಅಧಿಕ ಸಂಖ್ಯೆಯಲ್ಲಿದ್ದರು.

ವಸ್ತು ಪ್ರದರ್ಶನದಲ್ಲಿ 300 ಮಳಿಗೆಗಳಿದ್ದು ಸಿರಿಧಾನ್ಯ, ಸಾವಯವ ಕೃಷಿ ಪದ್ಧತಿ, ನೈಸರ್ಗಿಕ ಕೃಷಿ, ಪರಿಸರ ಸ್ನೇಹಿ ಉತ್ಪನ್ನಗಳು-ದೇಸಿ ಬೀಜ ಸಂರಕ್ಷಣೆ ಮತ್ತು ಜಾಗತಿಕ ಮಹತ್ವವುಳ್ಳ ವಸ್ತುಗಳ ಮಾರಾಟ ನಡೆಯಿತು. ಕೇರಳ, ಮಹಾರಾಷ್ಟ್ರ ಉತ್ತರಾಖಂಡ, ಆಂಧ್ರಪ್ರದೇಶ, ಮಣಿಪುರ, ರಾಜಸ್ಥಾನ ಸೇರಿದಂತೆ ಹಲವು ರಾಜ್ಯಗಳ ಸಿರಿಧಾನ್ಯ ತಿನಿಸುಗಳು ಮೇಳದಲ್ಲಿವೆ.

ರೈತರ ಮನಸೆಳೆದ ಕಾರ್ಯಾಗಾರ

ಈ ಮೇಳದಲ್ಲಿ ರೈತರಿಗಾಗಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆ ವಿವಿಯ ವಿಜ್ಞಾನಿಗಳು ಸಿರಿಧಾನ್ಯ ಮತ್ತು ನೈಸರ್ಗಿಕ ಕೃಷಿಯ ಕುರಿತು ಕನ್ನಡದಲ್ಲೇ ಮಾಹಿತಿ ನೀಡಿದರು. ಸಾವಯವ ಕೃಷಿ ಪ್ರಾಮುಖ್ಯತೆ ಮತ್ತದರ ಸವಾಲುಗಳು, ಮೌಲ್ಯವರ್ಧನೆಯಲ್ಲಿ ಯುವ ನವೋದ್ಯಮಿಗಳು ಪಾತ್ರ ಸೇರಿದಂತೆ ಹಲವು ವಿಚಾರಗಳ ಕುರಿತು ತಜ್ಞರು ಬೆಳಕು ಚೆಲ್ಲಿದರು. ರೈತರು ಮತ್ತು ಮಾರಾಟಗಾರರ ಸಂಪರ್ಕ ಕಲ್ಪಿಸಲಾಗಿದೆ. ಈಗಾಗಲೇ ಮೇಳದಲ್ಲಿ ಭಾಗವಹಿಸಲು 200 ಮಂದಿ ಮಾರಾಟಗಾರರು ಮತ್ತು ಉತ್ಪಾದಕರು ಹೆಸರು ನೋಂದಾಯಿಸಿಕೊಂಡಿದ್ದಾರೆ.